ದಿನಾಂಕಃ 16-07-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಎಸ್.ಎಸ್ ವಕೀಲರಿಂದ 2 ನೇ ಎದುರುದಾರರ ಪರಃ**

ನಮ್ಮ ಗ್ರಾಮವಾದ ಯಕ್ಕಂಚಿಯು ನಮ್ಮ ರಾಜ್ಯದ ಗಡಿ ಭಾಗದಲ್ಲಿ ಇರುವ ಗ್ರಾಮ ಎಂದರೆ ಸರಿ. ಸದರಿ ಗ್ರಾಮವು ಬೆಟ್ಟ ಗುಡ್ಡದ ಪ್ರದೇಶ ಹೊಂದಿದ್ದು ಬಹಳಷ್ಟು ಅಭಿವೃದ್ಧಿ ಹೊಂದಿರುವುದಿಲ್ಲ ಎಂದರೆ ಸರಿ. ನಮ್ಮ ಗ್ರಾಮದ ಜನಸಂಖ್ಯೆಯು 11 ಸಾವಿರಕ್ಕಿಂತ ಹೆಚ್ಚು ಇರುತ್ತದೆ. ನಮ್ಮ ಗ್ರಾಮವು ಎಲಿಹಡಗಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುತ್ತದೆ.

ಎಸ್ ಎಲ್ ಎ ಓರವರು ಹಾಗೂ ನೀರಾವರಿ ಇಲಾಖೆಯವರು ನಮ್ಮ ಜಮೀನುಗಳಿಗೆ ಭೇಟಿ ನೀಡಿ ಸರ್ವೇಯನ್ನು ಮಾಡಿ ಜಮೀನುಗಳಲ್ಲಿರುವ ವಾಸ್ತವಿಕ ಅಂಶಗಳನ್ನು ಬರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಾನು ಸರ್ವೇ ಆದಾಗ ಖುದ್ದಾಗಿ ಹಾಜರು ಇದ್ದೆ ಆದರೆ ನನಗೆ ಯಾವುದೇ ನೋಟೀಸ್ ನೀಡಿರಲಿಲ್ಲ. ನಾನು ಸ್ಥಳದಲ್ಲಿ ಅವರುಗಳು ಬರೆದುಕೊಂಡ ಅಂಶಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಆಗ ಸಲ್ಲಿಸಿರುವುದಿಲ್ಲ.

ನಿಪಿ-21 ರಿಂದ ನಿಪಿ-24 ರ ಪಹಣಿ ಪತ್ರಗಳಲ್ಲಿ ನಮ್ಮ ಜಮೀನಿಗೆ ಸಂಬಂಧಿಸಿದ ಮಾಹಿತಿಗಳು ಮತ್ತು ಬೆಳೆದಿರುವ ಬೆಳೆಯ ವಿವರಗಳು ಬರೆದಿರುತ್ತಾರೆ ಎಂದರೆ ಸರಿ. ನಾನು ಹಾಜರುಪಡಿಸಿದ ಪಹಣಿ ಪತ್ರಗಳಲ್ಲಿರುವ ಮಾಹಿತಿಯು ಸರಿಯಾಗಿರುತ್ತದೆ ಎಂದರೆ ಸರಿ. ಭೂಸ್ವಾಧೀನವಾದ ಜಮೀನನ್ನು ಹೊರತುಪಡಿಸಿ ನನಗೆ ಬೇರೆ ಜಮೀನು ಇರುತ್ತದೆ.

ನನ್ನ ಪ್ರಮಾಣ ಪತ್ರದಲ್ಲಿ ಪ್ಯಾರಾ ನಂಬರ 3 ಮತ್ತು 4 ರಲ್ಲಿ ಹೇಳಿರುವ ಹಾಗೆ ನಮ್ಮ ಜಮೀನು ನೀರಾವರಿ ಜಮೀನಾಗಿದ್ದು ಅದರಲ್ಲಿ ಕಬ್ಬಿನ ಬೆಳೆಯನ್ನು ಬೆಳೆದಿದ್ದು, ಕೊಳವೆ ಬಾವಿ, ಕೆಇಬಿ ಕನೆಕ್ಷನ್ ಮತ್ತು ಪೈಪಲೈನ ಮೂಲಕ ನೀರನ್ನು ಹಾಯಿಸಿ ಕೃಷಿಯನ್ನು ಮಾಡುತ್ತಿರಲಿಲ್ಲ ಹಾಗೂ ಸುಳ್ಳು ಸಾಕ್ಷಿಯನ್ನು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಖುಷ್ಕಿ ಜಮೀನುಗಳು ಒಂದು ಎಕರೆಗೆ ರೂ. 54,009/- ಮತ್ತು ನೀರಾವರಿ ಜಮೀನಗಳು ಪ್ರತಿ ಎಕರೆಗೆ ರೂ. 84,000/- ರಂತೆ ಮಾರಾಟವಾಗಿದೆ ಎಂದರೆ ಸರಿಯಲ್ಲ. ಸದರಿ ಜಮೀನುಗಳ ಬೆಲೆಯು ಅಷ್ಟಕ್ಕಿಂತ ಹೆಚ್ಚಾಗಿತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಮತ್ತು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ನಿಪಿ-1 ರಿಂದ ನಿಪಿ-4 ರ ರಶೀದಿಗಳು ಮತ್ತು ನಿಪಿ-5 ರಿಂದ ನಿಪಿ-13 ರ ಕಬ್ಬಿನ ಬಿಲ್ಲುಗಳು 2018 ನೇ ಸಾಲಿಗೆ ಮತ್ತು ನಂತರದ ಅವಧಿಗೆ ಸಂಬಂಧಪಟ್ಟಿರುತ್ತದೆ ಮತ್ತು ನನ್ನ ಸರ್ವೇ ನಂಬರಗಳು ಬರೆದಿರುವುದಿಲ್ಲ ಎಂದರೆ ಸರಿ. ನಿಪಿ-16 ರ ಹೆಸ್ಕಾಂ ರವರು ನೀಡಿದ ಕರೆಂಟ್ ಮಂಜೂರಾತಿ ಪತ್ರವು ದಿಃ 27-11-2018 ರಂದು ನೀಡಿರುತ್ತಾರೆ ಎಂದರೆ ಸರಿ. ನಿಪಿ-16 ರಲ್ಲಿ ಜಮೀನಿನ ಸರ್ವೇ ನಂಬರ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿ-16 ಯಾವುದೋ ಬೇರೆ ಜಮೀನಿಗೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ನಿಪಿ-17 ರಿಂದ ನಿಪಿ-20 ರ ಅರಿಶಿನ ಮಾರಿದ ರಶೀದಿಗಳು 2017 ನೇ ಸಾಲಿಗೆ ಮತ್ತು ನಂತರದ ಅವಧಿಗೆ ಸಂಬಂಧಪಟ್ಟಿರುತ್ತದೆ ಮತ್ತು ನನ್ನ ಸರ್ವೇ ನಂಬರಗಳು ಬರೆದಿರುವುದಿಲ್ಲ ಎಂದರೆ ಸರಿ. ನಿಪಿ-1 ರಿಂದ ನಿಪಿ-20 ರವರೆಗಿನ ದಾಖಲೆಗಳು ಭೂಸ್ವಾಧೀನ ಹೊಂದಿರುವ ಜಮೀನಿಗೆ ಸಂಬಂಧಿಸಿರುವುದಿಲ್ಲ ಮತ್ತು ಹೆಚ್ಚಿನ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಸದರಿ ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಮತ್ತು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎಸ್ ಎಲ್ ಎ ಓರವರು ಅವಾರ್ಡಿನ ನೋಟೀಸ್ ನೀಡಿದ ನಂತರ ನಾವು ವಿಳಂಬವಾಗಿ ದಿಃ 30-06-2016 ರಂದು ಆಕ್ಷೇಪಣೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಿಃ 30-06-2016 ರಿಂದ 30 ದಿನಗಳ ಒಳಗೆ ಎಸ್ ಎಲ್ ಎ ಓರವರು ನನ್ನ ಆಕ್ಷೇಪಣಾ ಅರ್ಜಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಡದ ಕಾರಣ ನಾನು

ನ್ಯಾಯಾಲಯಕ್ಕೆ ನೇರವಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಈ ಪ್ರಕರಣದ ಅರ್ಜಿಯನ್ನು ಕಾನೂನಿನಲ್ಲಿ ನಿಗದಿ ಪಡಿಸಿರುವ ದಿನಾಂಕದೊಳಗೆ ನ್ಯಾಯಾಲಯಕ್ಕೆ ಸಲ್ಲಿಸದೆ ಇರುವುದರಿಂದ ಈ ನ್ಯಾಯಾಲಯದ ಮುಂದೆ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ.

ಎಸ್ ಎಲ್ ಎ ಓರವರು ಸರಿಯಾಗಿ ನಮ್ಮ ಜಮೀನಿನ ಬೆಲೆಯನ್ನು ನಿಗದಿ ಪಡಿಸಿದ್ದು ಹೆಚ್ಚಿನ ಪರಿಹಾರವನ್ನು ಪಡೆಯಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನಮ್ಮ ಜಮೀನಿನ ಬೆಲೆಯು ರೂ. 20 ಲಕ್ಷಕ್ಕಿಂತ ಹೆಚ್ಚು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಸಮಯದಲ್ಲಿ 1 ನೇ ಎದುರುದಾರರ ಪರ ಮಾನ್ಯ ಡಿಜಿಪಿರವರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿರುವುದರಿಂದ ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಕ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಪವನೇಶ್ ಡಿ.)
1 ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ
ನ್ಯಾಯಾಧೀಶರು, ಬೆಳಗಾವಿ.